ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ಈಗ ಶಿ,ಓಲಿಗೆ ಸೊಸೈಟಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆ ಎಂದು ತಿಳಿದ್ದೀರಿ, ಆದರೆ ಅನೇಕ ಸಹಕಾರ ಸಂಘಗಳು ಪ್ರತಿವರ್ಷ ಜನರಲ್ ಬಾಡಿ ಮೀಟಿಂಗ್ ಆಗದೆ ಇದ್ದುದಕ್ಕೆಸ್ಕರ ಈ ಗೊಂದಲವಾಗಿದೆ. ಪ್ರತಿವರ್ಷ ಜನರಲ್ ಬಾಡಿ ಮೀಟಿಂಗ್ ಆಗಿದ್ದರೆ ಈ ಅವ್ಯವಸ್ಥೆ ಆಗುತ್ತಾ ಇರಲಿಲ್ಲ ಅದಕ್ಕೆ ತಾವು ಏನು ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ವಿವಿದೋದ್ದೇಶಗಳಲ್ಲಿ ತಾವು ಹೇಳುವ ಗೊಂದಲವು ಒಂದು.

ಶ್ರೀ ಬಿ. ಬೈರಪ್ಪಾಜಿ.—ಹಳ್ಳಿಗಾಡಿನಲ್ಲಿ ಪ್ರತಿಯೊಂದು ಪುಟಾಯಿತಿ ಸರಹದ್ದಿನಲ್ಲಿ ವಿದ್ಯಾವಂತರು ಸಹಕಾರ ತತ್ವವನ್ನು ತಿಳಿದುಕೊಂಡು ಕೆಲಸ ಮಾಡುವವರು ಸಿಕ್ಕುವುದು ಕಷ್ಟವಾಗಿದೆ ಇದು ಸರ್ಕಾರಕ್ಕೆ ಗೊತ್ತಿದೆಯೆ ? ಈ ಬಗ್ಗೆ ಹೋಬಳಿಗೆ ಎರಡನ್ನಾದರೂ ಕೂಡ ಸಣ್ಣ ಸಣ್ಣ ಸೊಸೈಟಿಗಳನ್ನು ಅಮಾಲ್‌ಗ ಮೇಟ್ ಮಾಡಿ ೧೦ ಸಾವಿರ ರೂಪಾಯಿ ಖರ್ಚುಗಳಿಗೊಂದರಂತೆ ಕೂಡಲೆ ವ್ಯವಸ್ಥೆ ಮಾಡಕಕ್ಕೆ ಏರ್ಪಾಡನ್ನು ಸರ್ಕಾರದವರು ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಶಂಕರ ಆಳ್ವ ಅವರು ಈ ಬಗ್ಗೆ ಕೇಳಿದ್ದಾರೆ ಅದಕ್ಕೆ ಉತ್ತರ ಕೊಟ್ಟಾಗಿದೆ.

**Breached Tank at Akkimangala*

407 SRI CHOWDA REDDY (Chintamani) — Will the Minister of State for Minor Irrigation be pleased to state.—

(*a*) whether it has come to the notice of the Government that the tank in Akkimangala, Kaiwara Hobli, Chintamani Taluk was breached about 25 years ago :

(*b*) the reason for not taking any action about this though this matter was brought to the notice of the Government number of times:

(*c*) whether it has come to the notice of the Government that the achkatdars of the said tank have been paying taxes to Government since 25 years with out getting any benefits :

(*d*) whether Government intends to provide relief to such ryots who have undergone number of difficulties ?

SRI 3. B. NAGARAL (Minister of State for Minor Irrigation).—

(*a*) Yes:

(*b*) The reason for this is due to various estimates being under consideration.

(*c*) This opinion is not correct.

(*d*) As the wet land tax from ryots has been cancelled since 1965-66, the question of providing relief does not arise.

ಶ್ರೀ ಚೌಡರೆಡ್ಡಿ —ಸ್ವಾಮಿ, (ಎ)ಗೆ ಉತ್ತರವಾಗಿ ತಾವು ಒಪ್ಪಿಕೊಂಡಿದ್ದೀರಿ, (ಬಿ)ಗೆ ಉತ್ತರವಾಗಿ ವೇರಿಯಸ್ ಎಸ್ಟಿಮೇಟ್ಸ್ ಮಾಡಿದ್ದಾರೆ. ಇಟ್ ಈಸ್ ಅಂಡರ್ ಕಾನಿಡರೇಷನ್ ಏಂದು ಹೇಳುತ್ತೀರಿ. ನಾನು ಹೇಳುವುದು ಈ ಹಳ್ಳಿಗಳಲ್ಲಿ, ನಮ್ಮ ಜನರು ನಾಟಕ ಆಡುವಾಗ ಒಬ್ಬೊಬ್ಬ ರೆಡ್ಡಿಯವರು ಬಂದಾಗ ಒಂದೊಂದು ಅಂಕ ಶುರುವಾಗುತ್ತದೆ, ರಾತ್ರಿಯೆಲ್ಲ ಒಂದೇ ಅಂಕದಲ್ಲಿ ನಿಂತು ಹೋಗುತ್ತದೆ. ಈಗ ಐದಾರು ಜನ ಚೀಫ್ ಇಂಜಿನಿಯರ್ಸ್ ಬಂದರು, ಒಬ್ಬೊಬ್ಬರು ಬಂದಾಗ ಒಂದೊಂದು ಅಂಕ ಶುರುವಾಗಿ ಕೆಲಸ ಹಾಗೆ ನಿಂತು ಹೋಗಿ ೨೫ ವರ್ಷ ಆಯಿತಾಯಿತು, ಆ ಕೆಲಸವನ್ನು ಪೂರ್ತಿ ಮಾಡುತ್ತೀರಾ ?

†ಶ್ರೀ ಎಸ್.ಬಿ. ನಾಗರಾಳ್.—ಈಗ ೨೫ ವರ್ಷದಿಂದ ಅದು ದುರಸ್ತಿಯಾಗಬೇಕು ಎನ್ನುವ ವಿಷಯ ಹೇಳಿದ್ದಾಗಿದೆ. ಈಗಾಗಲೇ ಡಿ ಪಿ ಎ ಪಿ. ಕಾರ್ಯಕ್ರಮದಲ್ಲಿ ಇದನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದಾರೆ. ಇದಕ್ಕೆ ಎಸ್ಟಿಮೇಟ್ ಕೂಡ ತಯಾರು ಮಾಡಿದ್ದಾರೆ ಇದಕ್ಕೆ ಮಂಜೂರಾತಿ ಕೊಡುವ ಸ್ಥಿತಿಯಲ್ಲಿದೆ. ಇನ್ನು ಮೇಲೆ ವಿಳಂಬವಾಗದಂತೆ ಸರ್ಕಾರದವರು ಆದಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಚೌತರೆಡ್ಡಿ.—(೫)ಗೆ ಉತ್ತರವಾಗಿ ೧೯೬೫-೬೬ ರಿಂದ ಲ್ಯಾಂಡ್ ಟ್ಯಾಕ್ಸ್ ವಜಾ ಮಾಡಿದ್ದೇವೆ ಎಂದು ಹೇಳಿದ್ದೀರಿ, ಅದನ್ನು ಮೊದಲಿನಿಂದ ವಜಾ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್ ಬಿ. ನಗರಾಳ್.—ಅದನ್ನು ವಜಾ ಮಾಡುವುದಕ್ಕೆ ಆಗುವುದಿಲ್ಲ. ತಮಗೆ ಗೊತ್ತಿದೆ ೧೯೬೫-೬೬ ರಿಂದ ಎಲ್ಲಾ ತರಿ ಭೂಮಿಗೆ ಏನು ತೆಗೆದುಕೊಳ್ಳುತ್ತಿದ್ದೆವೋ, ಅದಕ್ಕೆ ಖುಷ್ಕಿ ಭೂಮಿಗೆ ತೆಗೆದುಕೊಳ್ಳುವ ಕಂದಾಯ ತೆಗೆದುಕೊಳ್ಳಲೇಬೇಕು ಎಂದು ಹೇಳುವುದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಚೌಡರೆಡ್ಡಿ.—೧೯೬೫-೬೬ರ ಹಿಂದೆ ಆಗಿರುವ ನಷ್ಟದ ಅಂದಾಜು ಹಾಕಿದೀರಾ ಸ್ವಾಮಿ. ಮೈಸೂರು ಸಂಸ್ಥಾನದಲ್ಲಿ ಬ್ರೀಚ್ ಕೆಲಸಮಾಡಿದೆ ಇರುವ ಕೆಲಸ ಇಲ್ಲ ಎಂದು ಭಾವಿಸುತ್ತೇನೆ, ಆದರೆ ಆಗಿರುವ ನಷ್ಟದ ಅಂದಾಜು ಎಷ್ಟು ?

ಶ್ರೀ ಎಸ್. ಬಿ. ನಗರಾಳ್.—ಮಳೆಗಾಲದಲ್ಲಿ ಕೆರೆಯಲ್ಲಿ ನೀರು ನಿಲ್ಲುತ್ತದೆ. ಸ್ವಲ್ಪ ಭೂಮಿಗೆ ನೀರು ಪುರಾವಟೆ ಆಗುತ್ತದೆ ಆದುದರಿಂದ ಅದನ್ನು ವಜಾ ಮಾಡುವುದು ಕಷ್ಟ.

**Rehabilition of Persons who have lost their Lands under Gundlu Reservoir Scheme*

425 SRI R. RACHE GOWDA (Hanur).—Will the Chief Minister be pleased to state.—

(*a*) whether the Government have arranged for rehabilitation of poor ryots who have lost their lands under Gundlu Reservoir Scheme in Kollegal Taluk ;

(*b*) if so, the progress achieved so far in this behalf ?

SRI SUBASH ASTURE (Minister of State for Major and Medium Irrigation).—On behalf of

SRI D. DEVARAJ URS (Chief Minister).—

(*a*) and (*b*) No villages would be submerged in the catchment area of the Gundlur Reservoir. However, rehabilitation has been arranged with the co-operation of Revenue Department in the upper region of the catchment area to the people and cattle who were temporarily put up in the catchment area.

ಶ್ರೀ ಆರ್. ರಾಚೇಗೌಡ.—ಸ್ವಾಮಿ, ಜಮೀನು ಕಳೆದುಕೊಂಡವರಿಗೆ ಎಂದು ಹೇಳಿದ್ದೀರಿ, ಯಾವುದು ಮುಳುಗತೆಯಾಗಿಲ್ಲ ಎಂದು ಹೇಳುತ್ತೀರಿ, ೧,೮೦೦ ಎಕರೆ ಜಮೀನು ಮುಳುಗಡೆಯಾಗಿದೆ, ಬೇಕಾದಷ್ಟು ಜನ ಸಂಪೂರ್ಣವಾಗಿ ತಮ್ಮ ಜಮೀನನ್ನು ಕಳೆದುಕೊಂಡಿದ್ದಾರೆ. ಜಮೀನು ಕಳೆದುಕೊಂಡಿರತಕ್ಕ ಜನರಿಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?